# ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ

ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101

email: registrarksrdpru@gmail.com Office Phone: 08372-230338, Fax:08372-297343


ದಿನಾಂಕ: 19.03.2019

## ಪತ್ರಿಕಾ ಪ್ರಕಟಣೆಗಾಗಿ

**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದಲ್ಲಿ 'World Social Work Day' ದಿನಾಚರಣೆ**

ದಿನಾಂಕ 19.03.2019 ರಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗಿನಲ್ಲಿ 'ವಿಶ್ವ ಸಮಾಜ ಕಾರ್ಯ ದಿನ' ವನ್ನು ಆಚರಿಸಲಾಯಿತು. ಪ್ರೊ.ಡಾ.ಸುರೇಶ.ವಿ.ನಾಡಗೌಡರ, ಕುಲಸಚಿವರು, ಕ.ರಾ.ಗ್ರಾ. ಮತ್ತು ಪಂ. ರಾಜ್ ವಿಶ್ವವಿದ್ಯಾಲಯ, ಗದಗ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. 2019 ರ ಸಮಾಜ ಕಾರ್ಯ ದಿನದ ಘೋಷ ವಾಕ್ಯದ ಕುರಿತು ಮಾತನಾಡಿದ ಕುಲಸಚಿವರು ಮಾನವೀಯ ಸಂಬಂಧಗಳ ಪ್ರಾಮುಖ್ಯತೆ, ಪ್ರಮುಖವಾಗಿ ಸಮಾಜದ ದುರ್ಬಲವರ್ಗದವರನ್ನು ಕುರಿತು ಎಲ್ಲರಿಗೂ ಇರಬೇಕಾದ ಕಾಳಜಿ, ಅವರ ಏಳಿಗೆಗಾಗಿ ಪ್ರತಿಯೊಬ್ಬರು ಶ್ರಮಿಸಬೇಕಾದ ಅನಿವಾರ್ಯತೆಯನ್ನು ಕುರಿತು ಪ್ರಸ್ತಾಪಿಸಿದರು. ಗ್ರಾಮಗಳ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿಯಾಗಲು ಸಾಧ್ಯವಿಲ್ಲ, ಈ ವಿಶ್ವವಿದ್ಯಾಲಯವು ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಗಾಂಧೀಜಿಯವರ 'ನಯೀ ತಾಲೀಮ್' ಕಲ್ಪನೆಯನ್ನು ಇಲ್ಲಿ ಸಾಕಾರಗೊಳಿಸಲಾಗುತ್ತಿದೆ, ಕೇವಲ ತರಗತಿಗಳಲ್ಲಿ ಪಾಠಗಳನ್ನು ಮಾಡದೆ, ಪ್ರಾಯೋಗಿಕ ಅಧ್ಯಯನಕ್ಕೆ ಇಲ್ಲಿ ಅವಕಾಶವನ್ನು ಒದಗಿಸಲಾಗಿದ್ದು, ಇಲ್ಲಿ ವಿದ್ಯಾರ್ಥಿಗಳು ಸಮುದಾಯದಲ್ಲಿ ಒಂದಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಅಧ್ಯಯನವನ್ನು ಮಾಡಿದ ವಿದ್ಯಾರ್ಥಿಗಳು ಮಾನವೀಯ ಸಂಬಂಧಗಳ ಪ್ರಾಮುಖ್ಯತೆಯನ್ನು ಅರಿತು, ಬಡವ, ಬಲ್ಲಿದ ಎಂಬ ಭೇದಭಾವವಿಲ್ಲದೆ ಪ್ರತಿಯೊಬ್ಬರು ಘನತೆಯಿಂದ ಜೀವಿಸುವಂತಹ ವಾತಾವರಣವನ್ನು ಕಲ್ಪಿಸಬೇಕೆಂದು ತಿಳಿಸಿದರು. ಹಿಂದಿನ ಕಾಲದಲ್ಲಿ ಸಮುದಾಯದಲ್ಲಿರುವ ವ್ಯಕ್ತಿಗಳಲ್ಲಿ ಪರಸ್ಪರ ಸಹಕಾರವಿತ್ತು, ಒಬ್ಬರ ಕಷ್ಟದಲ್ಲಿ ಮತ್ತೊಬ್ಬರು ನೆರವಾಗುತ್ತಿದ್ದರು, ಇಂದಿನ ಯುಗದಲ್ಲಿ ಆ ಮನೋಭಾವ ಕುಂಠಿತಗೊಳ್ಳುತ್ತಿದೆ, ಇದು ಸಮಾಜದ ಅಭಿವೃದ್ಧಿಗೆ ಪೂರಕವಾದದ್ದಲ್ಲ, ಪ್ರತಿಯೊಂದಕ್ಕೂ ಸರ್ಕಾರದ ಮೇಲೆ ಅವಲಂಬಿತರಾಗದೆ, ಸಮಾಜದ ಇತರ ಸದಸ್ಯರ ಸಹಾಯದಿಂದ ತಮ್ಮ ಸಮಸ್ಯೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತಾವೇ ಬಗೆಹರಿಸಿಕೊಳ್ಳುವ ಮನೋಭಾವ ನಿರ್ಮಾಣವಾಗುವ ಅವಶ್ಯಕತೆಯಿದೆಯೆಂದು ಕುಲಸಚಿವರು ತಿಳಿಸಿದರು.



ಅಧ್ಯಕ್ಷೀಯ ಭಾಷಣ ಮಾಡುತ್ತಿರುವ ಪ್ರೊ.ಡಾ.ಸುರೇಶ.ವಿ.ನಾಡಗೌಡರ, ಕುಲಸಚಿವರು, ಕ.ರಾ.ಗ್ರಾ. ಮತ್ತು ಪಂ. ರಾಜ್ ವಿಶ್ವವಿದ್ಯಾಲಯ, ಗದಗ



ಕಾರ್ಯಕ್ರಮದ ಪ್ರಮುಖ ಭಾಷಣಕಾರರಾದ ಶ್ರೀ ಪ್ರಶಾಂತ ಜೆ.ಸಿ., ವಿತ್ತಾಧಿಕಾರಿಗಳು (ಪ್ರ), ಕ.ರಾ.ಗ್ರಾ. ಮತ್ತು ಪಂ. ರಾಜ್ ವಿಶ್ವವಿದ್ಯಾಲಯ, ಗದಗ

ಕಾರ್ಯಕ್ರಮದ ಪ್ರಮುಖ ಭಾಷಣಕಾರರಾದ ಶ್ರೀ ಪ್ರಶಾಂತ ಜೆ.ಸಿ, ವಿತ್ತಾಧಿಕಾರಿಗಳು (ಪ್ರ), ಕ.ರಾ.ಗ್ರಾ. ಮತ್ತು ಪಂ. ರಾಜ್ ವಿಶ್ವವಿದ್ಯಾಲಯ, ಗದಗ ಇವರು ಅಂತರಾಷ್ಟ್ರೀಯ ಸಮಾಜಕಾರ್ಯದ ಈ ವರ್ಷದ ಘೋಷವಾಕ್ಯ "ಮಾನವ ಸಂಬಂಧಗಳ ಪ್ರಾಮುಖ್ಯತೆಯನ್ನು ಉತ್ತೇಜಿಸುವುದರ ಕುರಿತು ಮಾತನಾಡಿದರು. ಯಾವುದೂ ಏಕಾಂತದಲ್ಲಿ ಅಸ್ತಿತ್ವದಲ್ಲಿ ಇರುವುದು ಸಾಧ್ಯವಿಲ್ಲ, ಪ್ರತಿಯೊಂದು ಪರಸ್ಪರ ಸಂಬಂಧವನ್ನು ಹೊಂದಿದೆ, ಅದೇ ರೀತಿ ಮಾನವ ಸಂಬಂಧಗಳೂ ಸಹ, ಮನುಷ್ಯ ತನ್ನ ಆಂತರಿಕ ಮತ್ತು ಬಾಹ್ಯ ಎರಡೂ ಜೀವನದಲ್ಲಿ ಮತ್ತೊಬ್ಬರ ಮೇಲೆ ಅವಲಂಬಿತನಾಗಿದ್ದಾನೆ. ಆದುದರಿಂದ ಈ ಸಂಬಂಧಗಳಲ್ಲಿ ಗೌರವ, ಪ್ರೀತಿ, ಸಹಕಾರ ಮನೋಭಾವ ಇರುವುದು ಅತೀ ಅವಶ್ಯಕವಾಗಿದೆ. ಸಮಾಜದಲ್ಲಿರುವ ಪ್ರತಿ ಒಬ್ಬ ವ್ಯಕ್ತಿಯು ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದ್ದಾನೆ, ಅದು ಒಬ್ಬ ರೈತನಾಗಿರಬಹುದು, ಶಿಕ್ಷಕನಾಗಿರಬಹುದು, ಕಂಬಾರನಾಗಿರಬಹುದು, ಹೀಗೆ ಪ್ರತಿಯೊಬ್ಬರು ತಮ್ಮದೇ ಆದ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ, ಇವರೆಲ್ಲರ ಮಧ್ಯೆ ಸೌಹಾರ್ದಯುತ ಸಂಬಂಧವಿರುವುದು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಅತೀ ಅವಶ್ಯಕವಾಗಿದೆ. ಈ ಸಂದರ್ಭದಲ್ಲಿ ರಾಮಾನುಜಂರವರ ಮಾತನ್ನು ಅವರು ಜ್ಞಾಪಿಸಿಕೊಂಡರು "ಸಮಾಜ ಕೊಡದೇ ಇರುವುದು ಯಾವುದು ನನ್ನ ಹತ್ತಿರ ಇದೆ?' ಇದರ ತಾತ್ಪರ್ಯ ನಾವು ಏನನ್ನು ಪಡೆದಿದ್ದೇವೆಯೋ ಅದೆಲ್ಲವನ್ನು ಈ ಸಮಾಜವೇ ನಮಗೆ ನೀಡಿದೆ, ಆದುದರಿಂದ ಸಮಾಜಕ್ಕೆ ಮರಳಿ ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು. ರಮಣಮಹರ್ಷಿಗಳನ್ನು ಬೇರೆಯವರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ಕೇಳಿದಾಗ, "ಬೇರೆಯವರು ಎನ್ನುವುದೇ ಇಲ್ಲ, ಎಲ್ಲವೂ ನಾವೇ" ಎಂದು ಉತ್ತರಿಸಿದ್ದರಂತೆ, ಇದು ನಾವು, ಪರರು ಎನ್ನುವ ಭಾವನೆಯನ್ನು ಹೊಂದದೆ ಎಲ್ಲರೊಡನೆ ಪ್ರೀತಿ, ವಿಶ್ವಾಸದಿಂದ ನಡೆದುಕೊಳ್ಳಬೇಕೆಂಬ ಸಂದೇಶವನ್ನು ನೀಡುತ್ತದೆ. ಸಮಾಜದಲ್ಲಿ ಶಾಂತಿ ನೆಲೆಸುವಂತಾಗಲು, ಯುದ್ಧಗಳನ್ನು ತಡಗಟ್ಟಲು ಮಾನವೀಯ ಸಂಬಂಧಗಳನ್ನು ಉತ್ತೇಜಿಸುವುದು ಅನಿವಾರ್ಯ ಎಂದು ತಿಳಿಸಿರು. ಕಾರ್ಯಕ್ರಮವನ್ನು ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

**ಕುಲಸಚಿವರು**

ಗೆ,

ಸಂಪಾದಕರು,

ಮೇಲಿನ ಪ್ರಕಟಣೆಯನ್ನು ಸುದ್ದಿಯನ್ನಾಗಿ ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ವಿನಂತಿ.